ಶ್ರೀ ಟಿ. ಟಿ. ಮಾಯಣ್ಣ.—ಅಧ್ಯಕ್ಷರೆ, ನಮ್ಮ ಕಡೆ ೧೦–೧೫ ಎಕರೆ ಇರುವ ಪ್ಲಾಂಟೇಷನ್ ನವರು ಯಾರೂ ಇಲ್ಲ. ೧೦ ಗುಂಟೆ, ೨೦ ಗುಂಟೆ ಹೆಚ್ಚು ಅಂದರೆ ಒಂದು ಎಕರೆ ಭೂಮಿಯಲ್ಲಿ ಪ್ಲಾಂಟೇಷನ್ ಮಾಡತಕ್ಕವರೇ ಇರುವವರು. ಆದುದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಈ ೨ರೂಪಾಯಿ ೧೫ಪೈಸೆ ಏನಿದೆ ಇದನ್ನು ಮನ್ನಾ ಮಾಡಿ ಅದರ ಖರ್ಚು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಅಧ್ಯಕ್ಷರೆ, ೨ರೂಪಾಯಿ ೧೫ಪೈಸೆ ಏನು ಹೆಚ್ಚಾಗುವುದಿಲ್ಲ. ಅಲ್ಲಿಯ ಇನ್‌ಸ್ಟ್ರುಮೆಂಟ್ ಎಕ್ವಿಪ್‌ಮೆಂಟ್, ಎಲ್ಲಾ ಖರ್ಚು ನಾವು ನೋಡಿಕೊಳ್ಳುವಾಗ ಈ ೨ ರೂಪಾಯಿ ೧೫ ಪೈಸೆ ಹೆಚ್ಚಾಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಇನ್‌ಸಿಸ್ಟ್ ಮಾಡುವುದು ಬೇಡ ಅಂತ ನಾನು ಹೇಳುತ್ತೇನೆ.

Delay in according sanction to drinking water supply schemes in some Villages of Davangere and Chitradurga Taluks

405 SRI T. CHOWDAIAH (Bharama sagara).—Will the Minister for Rural Development and Panchayat Raj be pleased to state.—

(a) whether it is a fact that the proposals for providing drinking water facilities to SC/STs at Kereyagalahalli and Hebbal Villages in Davanagere Taluk and Medikeripura Village in Chitradurga Taluk submitted to the Government and pending sanction of the same at the Government level;

(b) the reasons for not sanctioning these schemes inspite of the great difficulties experienced by the villagers brought to the notice of the concerned authorities ;

(c) when these schemes will be taken up ?

SRI B. RAMAIAH (Minister for Rural Development and Panchayat Raj).—

(a) Yes, Sir.

(b) The schemes were not covered in any of the approved programmes for 1979-80.

(c) These schemes will be considered to be taken up during 1980-81.

ಶ್ರೀ ಟಿ. ಚೌಡಯ್ಯ.—ಅಧ್ಯಕ್ಷರೆ, ಚಿತ್ರದುರ್ಗ ತಾಲ್ಲೂಕಿನ ಮಡಿಕೇರಿಪುರ ಗ್ರಾಮ ಹಾಗೂ ದಾವಣಗೆರೆ ತಾಲ್ಲೂಕಿನ ಕೆರೆಯಗಲಪಳ್ಳಿ ಹಾಗೂ ಹೆಬ್ಬಾಳ ಗ್ರಾಮಗಳಿಗೆ ನೀರು ಸರಬರಾಜು ಮಾಡಲಿಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೆ, ೧೯೭೮-೭೯ರಲ್ಲಿ ಮೈನಾಟಿನೆನ್ಸ್ ದೃಷ್ಟಿಯಿಂದ ಇದನ್ನು ನಾವು ಪಂಚಾಯಿತಿಗೆ ಹ್ಯಾಂಡ್‌ಓವರ್ ಮಾಡಿದ್ದೇವೆ.

ಶ್ರೀ ಟಿ. ಚೌಡಯ್ಯ.—ಅಧ್ಯಕ್ಷರೆ, ಎನ್.ಆರ್.ಡಬ್ಲ್ಯೂ.ಪಿ. ಸ್ಕೀಮ್‌ನಲ್ಲಿ ಎರಡು ಸಾವಿರ ಸಂಖ್ಯೆ ಹರಿಜನ ಗಿರಿಜನ ಇರತಕ್ಕ ಪಳ್ಳಿಗಳಿಗೆ ಬಾವಿಗಳನ್ನು ಕೊಡುವ ಬಗ್ಗೆ ಸುಮಾರು ನಾಲ್ಕೈದು ಪ್ರಪೋಸಲ್ ಕಳುಹಿಸಿಕೊಟ್ಟಿದ್ದೇವೆ. ಚಿತ್ರದುರ್ಗ ತಾಲ್ಲೂಕಿನ ಮಡಿಕೇರಿಪುರ ಗ್ರಾಮ ಹಾಗೂ ದಾವಣಗೆರೆ ತಾಲ್ಲೂಕಿನ ಕೆರೆಯಗಲಪಳ್ಳಿ ಹಾಗೂ ಹೆಬ್ಬಾಳ್ ಗ್ರಾಮಗಳ ಪಟ್ಟಿಯನ್ನು ಕಳುಹಿಸಿಕೊಟ್ಟಿರುವುದು ಸರ್ಕಾರದ

ಗಮನಕ್ಕೆ ಬಂದಿದೆಯೆ, ಅದರ ಬಗ್ಗೆ ತೀವ್ರವಾಗಿ ಯಾವಾಗ ಕ್ರಮ ತೆಗೆದುಕೊಳ್ಳುತ್ತಿರಾ ಅಲ್ಲಿ ಬೇಸಿಗೆ ಕಾಲದಲ್ಲಿ ನೀರು ಕುಡಿಯಲಿಕ್ಕಿಲ್ಲ ಈಗಾಗಲೇ ಟಿ. ಡಿ ಬಿ. ಯವರು ಪ್ರಯತ್ನಪಟ್ಟು ಫೈಲ್ ಆಗಿದ್ದಾರೆ ಈಗಾಗಲೇ ಆ ಪ್ರದೇಶಗಳಿಗೆ ಸ್ಟೇಟ್ ಜಿಯಾಲಿಜಿಸ್ಟ್ ಕೂಡ ಬಂದು ಪರೀಕ್ಷೆ ಮಾಡಿ ಹೋಗಿದ್ದಾರೆ. ಆದರೂ ಕೂಡ ಇಷ್ಟು ವಿಳಂಬ ಏತಕ್ಕೆ ಆಗುತ್ತಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೆ, ೧೯೭೯-೮೦ರ ರೊಳಗೆ ಕೇಂದ್ರ ಹಾಗೂ ರಾಜ್ಯದ ಎರಡರ ವಾಪ್ತಿಯೊಳಗೆ ಸೇರಿಕೊಂಡು ಬಂದಿರಲಿಲ್ಲ. ಈಗತಾನೇ ನಮ್ಮ ಮುಂದೆ ಬಂದಿದೆ. ನಾನು ಕೂಡ ಹೋಗಿ ನೋಡಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ಏನು ಇದೆ ಎನ್ನುವುದು ಅರ್ಥವಾಗಿದೆ. ಅದಷ್ಟು ಶೀಘ್ರವಾಗಿ ನೀರಿನ ಸೌಲಭ್ಯ ಒದಗಿಸುವ ಬಗ್ಗೆ ವ್ಯವಸ್ಥೆ ಮಾಡುತ್ತೇನೆ.

Kannada and Urdu Primary Schools in Bailhongal Constituency.

472 SRI R. C BALE KUNDARGI (Bailhongal).— Will the Minister for Education be pleased to state.—

(a) the number of Kannada and Urdu (Primary) Schools coming under Bailhongal Assembly Constituency ;

(b) the number of Kannada and Urdu Schools owning separate (Government) Building;

(c) the number of Urdu and Kannada Schools working under Bailhongal Municipality ;

(d) the number of Urdu and Kannada Schools coming under Municipality having own buildings (Urdu and Kannada School buildings may please be given separately)?

SRI G. S. SHANKAR RAO (Minister for Education).—

	Kannada	Urdu
(a)	74	8
(b)	70	2
(c)	5	2
(d)	3	1

ಶ್ರೀ ಆರ್. ಸಿ. ಬಾಳೆಕುಂದರ್ಗಿ.—ಅಧ್ಯಕ್ಷರೆ, ಮಾನ್ಯ ಮಂತಿಗಳ ಉತ್ತರದಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಉರ್ದು ಶಾಲೆಯ ಬಿಲ್ಡಿಂಗ್ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಅದು ಸರ್ಕಾರಿ ಬಿಲ್ಡಿಂಗ್ ಅಲ್ಲ ಅಂತ ನನ್ನ ಅಭಿಪ್ರಾಯ. ಏಕೆಂದರೆ ಅಲ್ಲಿರುವಂತಹ ಉರ್ದು ಶಾಲೆಯನ್ನು ೨೦ ವರ್ಷದ ಹಿಂದೆ ಸ್ಯಾಲರಿ ಹಂಚುವ ಮನುಷ್ಯನಿಂದ ಹಣ ದುರುಪಯೋಗವಾಗಿದೆ ಅಂತ ಅವನಿಂದ ತೆಗೆದುಕೊಂಡಿರ ತಕ್ಕದ್ದು. ಅಲ್ಲಿ ಎರಡು ಸಣ್ಣ ರೂಮುಗಳು ಮಾತ್ರ ಇವೆ. ಮೂರು ನಾಲ್ಕು ಜನ ಶಿಕ್ಷಕರು ಇದ್ದಾರೆ. ನಾವು ಅಲ್ಲಿಗೆ ಹೋದಾಗ ನಮ್ಮ ಮುಸ್ಲಿಮ್ ಭಾಂದವರು ಕನ್ನಡ ಶಾಲೆಗಳು ಮೂರು ಇದೆ. ಉರ್ದು ಶಾಲೆ ಒಂದು ಮಾತ್ರ ಇದೆ ಎನ್ನುವ ದೂರನ್ನು ಹೇಳುತ್ತಿದ್ದಾರೆ. ಆದುದರಿಂದ ಈ ವರ್ಷದ ಅಲಾಟ್‌ಮೆಂಟಿನಲ್ಲಿ ಸುಮಾರು ನಾಲ್ಕು ರೂಮುಗಳನ್ನಾದರೂ ಉರ್ದು ಶಾಲೆಗಳಿಗೆ ಬಿಡುಗಡೆ ಮಾಡ ಬೇಕೆಂದು ಸೂಚನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತೀರಾ ?

† ಶ್ರೀ ಜಿ. ಬಿ. ಶಂಕರ್‌ರಾವ್.—ಅಧ್ಯಕ್ಷರೆ, ಸರ್ಕಾರದ ಕಟ್ಟಡ ಅಂತ ಹೇಳಿದ್ದೇವೆ. ಈಗ ಅಲ್ಲಿ ಶಾಲಾ ಕಟ್ಟಡ ಸರಿಯಾಗಿದೆ. ಹೊಸ ಕಟ್ಟಡ ಕಟ್ಟಿಸಬೇಕು ಅಂತ ಅಭಿಪ್ರಾಯ ಮಾನ್ಯ ಸದಸ್ಯರಿಗೆ ಇದ್ದರೆ, ನಾವು ಡೆಪ್ಯುಟಿ ಕಮಿಷನರ್‌ಗೆ ಹಣ ಕೊಟ್ಟಿರುತ್ತೇವೆ. ಮಾನ್ಯ ಸದಸ್ಯರು ತನ್ನ ಪ್ರಭಾವ